(700)

Reg No. M 1293
Daily & Weekl

SATYAVADI Oldest Newspaper of Mysore

ಸತ್ಯವಾದಿ

ಸಂಪುಟ 26 ಸಂಚಿಕೆ 304] ಮಂಗಳವಾರ 18—5—1943 [3 ಪೈ

This Space is available for Advt.

Opera -- Aryamala

ಅಪೆರಾ——
ಆರ್ಯಮಾಲಾ !
ಆರ್ಯಮಾಲಾ !
ಅರ್ಯಮಾಲಾ !

ಪಿ. ಯು. ಚಿನ್ನಪ್ಪ, ಸಂತಾನಲಕ್ಷ್ಮಿ, ಶಕುಂತಲ, ಕೃಷ್ಣ, ಮಧುರಂ
ಮುಂತಾದವರು ಪಾತ್ರವಹಿಸಿರುವರು

ಇದು ನಿಮಗೆ ಗೊತ್ತೇ ?

ಯುದ್ಧಕ್ಕೆ ಮುಂಚೆ ಇಂಡಿಯಾದಲ್ಲಿ 600 ವರ್ಕ್‌ಷಾಪುಗಳ ಇದ್ದುವಂತೆ. ಈಗ ನ್ಯೂಸಂರಿ ಎಂಜಿನೀಯರಿಂಗ್ ವರ್ಕ್‌ಷಾಪುಗಳು ಇವೆ. ಇವುಗಳ ಜೊತೆಗೆ ಅಲ್ಲಾ ಎಂಜನಿಯರಿಂಗ್ ಸೆಲಕರಣೆಗಳ ತಯಾರಿಕೆಯಲ್ಲಿ ತೊಡಗಿವೆ ಟಿಟಲ ರೈಲ್ವೇ ಮತ್ತು ಇತರ ವರ್ಕ್‌ಷಾಪುಗಳು ಇತರ ಪದ್ಧತಿಗಳ ತಯಾರಿಕೆಯಲ್ಲಿ ತೊಡಗಿವೆ ಇವುಗಳಲ್ಲದೆ ಸಣ್ಣಪುಟ್ಟ ಕೈಗಾರಿಕೋದ್ಯಮದಲ್ಲಿ ತೊಡಗಿರುವ ಒಂಡನಾಳಸ್ಥರು ಅನೇಕ ಸಾಮಾನುಗಳ ತಯಾರಿಕೆಯಲ್ಲಿ ಕಂಟ್ರಾಕ್ಟು ವಹಿಸಿ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ.

ಇಂಡಿಯಾ ದೇಶವು ಯುದ್ಧಕ್ಕೆ ಬೇಕಾಗಿರುವ ಸಾಮಾನುಗಳಲ್ಲಿ ಶೇಕಡಾ ೪೦ ರಷ್ಟನ್ನು ಈಗ ತಯಾರುಮಾಡುತ್ತಿದೆ.

ಭಾರತ ದೇಶದಲ್ಲಿರುವ ಅನೇಕ ಗ್ರಾಮವಾಸಿಗಳು ಳಿ ಲಕ್ಷ ರೂಪಾಯಿಗಳ ಬೆಲೆ ಬಾಳುವಷ್ಟು ಸೈನಿಕರು ಹಾಕಿಕೊಳ್ಳುವ ಒಂದು ನಮೂನೆಯ ಹ್ಯಾಟುಗಳನ್ನು ಒದಗಿಸಿದ್ದಾರೆ.

೧೯೪೨ನೇ ಪರ್ಷಾಂತ್ಯದಲ್ಲಿ ಭಾರತೀಯ ಯುದ್ಧವೈದ್ಯಳಿಗೆ ಇಂಡಿಯನ್ ರೆಡ್‌ಕ್ರಾಸಿನವರು ೧೫೦೦೦ ಗಳಿಗೆ ಮೇಲ್ಪಟ್ಟ ಔಷಧ ಪದಾರ್ಥಗಳ ಪಾರ್ಸಲುಗಳನ್ನು ಸುರಕ್ಷಾಮು ಮಾಡಿದ್ದಾರೆ.

ಟ್ಯೂನಿಷಿಯಾದಲ್ಲಿ ಇಟಲಿಯನ್ ಬಂಧನದಿಂದ ವಿಮುಕ್ತರಾಗಿರುವ ಪ್ರಜೆಗಳಿಗೆ ವಿತ್ತ ಸಹಾಯ ಸಮಿತಿಗಳು ಔಷಧ ಸಾಮಗ್ರಿಗಳನ್ನು ಹಂಚಲಾರಂಭಿಸಿವೆ. ಔಷಧ ಬಟ್ಟೆಗಳು ಅಗತ್ಯವಾದ ಮರಿಗೆಲ್ಲಾ ವನ್ನು ಕೊಲಾಗುತ್ತಿದೆಯೆಂದು ಸಹಾಯ ಮತ್ತು ಪುನರ್ವಸತಿ ಯ ವೈದಿಕನ್ ಡೈರೆಕ್ಟರು ವಾಷಿಂಗ್ಟನ್ನಿನಲ್ಲಿ ತಿಳಿಸಿದ್ದಾರೆ. (ರಾ)

ಬರ್ಲಿನ್ ಮೇಲೆ ಧಾಳಿ

ಈತ್ತೆ ಬರ್ಲಿನ್ ಮೇಲೆ ಧಾಳಿಯಾಯಿತು. ಇದು 64 ನೇ ಸಲದ ಫ್ರಾನಿನ ಬಂಡು. ವಿಮಾನ ನಿಲ್ದಾಣಗಳನ್ನು ಮಿತ್ರಪಕ್ಷದ ವಿಮಾನಗಳು ನಾಶಮಾಡಿದವು. ಬೆಲ್ಜಿಯಂಗಳಲ್ಲಿ ಧಾಳಿಯಾಯಿತು. ಶತ್ರುಕೋನ್‌ವಾಯಿ ಮೇಲೆ ಧಾಳಿ ಮಾಡಿ 250 ಟನ್ ಬಾಂಬನ್ನು ಸೇರಿನ ಪಾಲುಮಾಡಿದರು. ಕಳೆದ ವಾರ ಶತ್ರುಗಳ 125 ವಿಮಾನಗಳು ಯೂರೊಪಿನಲ್ಲಿ ನಾಶವಾಗಿದೆ. ಬ್ರಿಟಿಷ್ ಮೇಲೆ ಒಂದು ವಿಮಾನಧಾಳಿಯಲ್ಲಿ ಶತ್ರುಗಳ 3 ವಿಮಾನ ನಾಶವಾದವು.

ಂ ಂ

ರೂಸ್‌ವೆಲ್ಟರ ಪ್ರತಿನಿಧಿ

ಮಿ|| ರೂಸ್‌ವೆಲ್ಟರ ಪ್ರತಿನಿಧಿಯಾದ ಜೋಸೆಫ್ ಡೇವಿಸ್‌ರವರು ಖುದ್ದಾಗಿ ಜಾರಮಾಡಲು ಒಂದು ಕಾಗದವನ್ನು ರಷ್ಯಾಕ್ಕೆ ತೆಗೆದುಕೊಂಡುಹೋಗಿ ಮಿ|| ಸ್ಟಾಲಿನ್‌ನನ ರಿಗೆ ಕೊಡುವುದು. ಇವರು ಈಗ ಪರ್ಷಿಯಲ್ಲಿರುವರು

ಂ ಂ

ಮೂಗೂರಿನಲ್ಲಿ ಖೂನಿ

ಮೈಸೂರಿನಲ್ಲಿ ಲಾಯರಾಗಿರುವ ಮಿ|| ಲಂಕಾಸ್ವಾಮಿಯವರ ತುದಿಯುವಂಸ್ತು ಮೂಗೂರಿನಲ್ಲಿ ಖೂನಿ ಮಾಡಿ ಅವರ್ಹಾಗೆ ಯಲ್ಲಿಟ್ಟಿದ್ದ 2 ಸಾವಿರ ರೂಪಾಯಿಯನ್ನು ಅಪಹರಿಸಿರುವರ್ಕಾರೆ. ಕಳ್ಳರು ಇನ್ನೂ ಸಿಕ್ಕಿಲ್ಲ.

ಂ ಂ

ಶೃಂಗೇರಿ ಮಠ

ಶ್ರೀ ಹೆಚ್. ಎಸ್. ಸಂಪಂಗಿ ರಾಮಯ್ಯನವರು ಶೃಂಗೇರಿ ಮಠದ ವಿಚಾರಣೆಗಾಗಿ ನೇಮಕರಾಗಿರುವರು. ಇವರು ಈ ಜನ್ಮಗಿರಿ ಸಬ್‌ಡಿವಿಜನ್ ಆಫೀಸರಾಗಿರುವರು.

ಸಂಸ್ಥಾನದಲ್ಲಿರುವ ರಾಜಕೀಯ ಖೈದಿಗಳು

ಸಂಸ್ಥಾನದಲ್ಲಿರುವ ರಾಜಕೀಯ ಖೈದಿಗಳಲ್ಲಿ ಸುಮಾರು 300 ಜನವನ್ನು ಸರಕಾರದವರು ಬಿಡುವ ಯೋಚನೆಯಲ್ಲಿದ್ದಾರೆ.

ಂ ಂ

ಪ್ರಪಂಚ ವಿಶ್ವವಿದ್ಯಾನಿಲಯ

ಸಂಯುಕ್ತ ಜನಾಂಗವೆಲ್ಲ ಸೇರಿ ಒಂದು ವಿಶ್ವವಿದ್ಯಾನಿಲಯವನ್ನು ಯುದ್ಧಾನಂತರ ಲಂಡನ್ನಿನಲ್ಲಿ ಏರ್ಪಡಿಸಲು ಹಲವರು ಪ್ರಯತ್ನ ಮಾಡುತ್ತಿರುವರು.

ಂ ಂ

ಸಿಸಲಿಮೇಲೆ ಧಾಳಿ

ಸಿಸಲಿ ಬೋನ ಮೇಲೆ ಮಿತ್ರಮಂಡಲಿಯ ವಿಮಾನಗಳು ಬಿರುಸಾಗಿ ಧಾಳಿ ಮಾಡುತ್ತಿವೆ. ಈಸಾಲೆರ್ಸ್ ಸ್ಟೇಫಾನಿಗಳು ಮಿತ್ರಪಕ್ಷದ ಗುರಿಯಾಗಿವೆಯೆಂದು ಹೇಳಬಹುದು.

ಂ ಂ

ರಷ್ಯನರ ಸಾಹಸ

ರಷ್ಯನರು ಡೊನೆಟ್ಸ್ ನದಿ ದಾಟಿ ಲಿಸ್‌ಚಾನ್ಸ್ಕ್ ಬಳಿ ಶತ್ರುಗಳ ಸ್ಥಾನಗಳನ್ನು ಹಿಡಿದರು. ಉತ್ತರ ರಷ್ಯನರು ಬ್ರಿಯಾನ್ಸ್ಕ್ ನೆವ್ರೊಸಟ್ರೋಪ್ಸ್ಕ್ ಮೇಲೆ ಧಾಳಿ ನಡೆಸಿದರು. ನೊವೊರೊಸಿಸ್ಕ್ ಮೇಲೆ ಗುಂಡಿನ ಹೊಡೆತ ಹೆಚ್ಚಿಗಿದೆ.

ಂ ಂ

ಪುಂಡು ಕಂದಾಯ

ಸಾಂಗ್ಲಿಯಲ್ಲಿರುವ ದೊಡವಾಡ್ ಎಂಬ ಹಳ್ಳಿಗೆ 2800 ಪುಂಡು ಕಂದಾಯ ವಿಧಿಸಲಾಗಿದೆ.

ಸತ್ಯವಾದಿ ಪತ್ರಿಕೆಗೆ
ಚಂದಾದಾರರಾಗಿರಿ

ಸಾಲೋಮನ್‌ನಲ್ಲಿ ಅಮೇರಿಕನ್ ಧಾಳಿಗಳು

ಸಾಲೋಮನ್‌ನಲ್ಲಿ ಅಮೇರಿಕನ್ ವಿಮಾನ ಧಾಳಿಗಳು ಅಧಿಕ ರೀತಿಯಲ್ಲಿ ದಿನೇದಿನೆ ಹೆಚ್ಚುತ್ತಿದೆ ಕೌಪಿಲಿ, ಬೆಲ್ಲಾಲಿ ಬೂಸ್, ಸಿಲ್ವಾಣಗಳ ಮೇಲೆ ನಿನ್ನೆ ಧಾಳಿಯಾಯಿತು. ಶತ್ರುಗಳ ಡಾರ್ಮಿನ್ ಮೇಲೆ ಧಾಳಿ ಮಾಡಿದವು. ಅನೇಕ ಜಪಾನಿ ವಿಮಾನಗಳನ್ನು ನಾಶಮಾಡಲಾಯಿತು. ಜಪಾನಿಯರು ಕುಮ್ಮಿಂಗ್ ಧಾಳಿಮಾಡಿ 15 ವಿಮಾನಗಳನ್ನು ಕಳೆದುಕೊಂಡರು.

ಟುನಿಷಿಯಾ ದಿವಸ

ಶುಕ್ರವಾರ 21-5-43 ಮೈಸೂರು ದೇಶವಲ್ಲಿ ಎಲ್ಲಾ ಸರ್ಕಾರಿ ಆಫೀಸಿಗೆ ರಜ ಕೊಟ್ಟಿದೆ. ಇದೇ ದಿವಸ ಮುಂಬಯಿನಲ್ಲಿ ಪ್ರಚಂಡ ಮೆರವಣಿಗೆಯಾಗುವುದು. ಗನ್ನರು ಸೆಲ್ಯೂಟ್ ತೆಗೆದು ಕೊಳ್ಳುವುದು. ಒಂದು ಮೈಲಿ ಉದ್ದದ ಮೆರವಣಿಗೆಯಾಗುವುದು, ಆಗ ಟ್ಯಾಂಕ್ ತೋಪು, ಸೈನಿಕರು ಇವರೆಲ್ಲರು ಭಾಗವಹಿಸುವರು.

ಯುದ್ಧದ ಫಿಲಂ

15—9—43 ರಿಂದ ಹಿಂದೂಸ್ಥಾನದಲ್ಲೆಲ್ಲಾ ಯುದ್ಧದ ಫಿಲಮ್ಮನ್ನು 1000 ಅಡಿಗೆ ಮಿಗಿದಿದ್ದನ್ನು ಪ್ರತಿ ಆಟದಲ್ಲಿಯೂ ತೋರಿಸಿಯೇ ತೀರಬೇಕೆಂದು ಸರ್ಕಾರಿ ಆಜ್ಞೆಯಾಗಿದೆ.

ಅನ್ನದಾನ

ಟ್ಯೂನಿಷಿಯಾದಲ್ಲಿ ನಿಃಕ್ರಮಿಸಿಡಲಿಗೆ ಜಯವಾದದ್ದರಿಂದ ರಾಂಚಿಯಲ್ಲಿ ಬಡವರಿಗೆ ಅನ್ನದಾನಮಾಡಲು ಸರ್ಕಾರವು 20 ಸಾವಿರ ರೂಪಾಯಿ ಮಂಜೂರು ಮಾಡಿದೆ

Edited, Printed & published by M. S. Krishna Rao, at the Satyavadi Press. Chamaraja Agrahar, Mysore.

ಇಂಡಿಯಾ ವಿಷಯದಲ್ಲಿ

ಪ್ರಸಿದ್ಧ ಅಮೇರಿಕನ್ ಗ್ರಂಥಕರ್ತನ

ಅಭಿಪ್ರಾಯ

ಅಮೆರಿಕಾದ ಪ್ರಸಿದ್ಧ ಗ್ರಂಥಕರ್ತರಾದ ಎಡ್ಗರ್ ಸ್ನೋರವರು ಅಲ್ಲಿನ ಹಿಂದು ವೃತ್ತಪತ್ರಿಕೆಯಲ್ಲಿ ಆಂಗ್ಲೇಯರು ಹಿಂದೂಸ್ಥಾನವನ್ನು ಹಿಂದೂಸ್ಥಾನದವರೂ ಜಪಾನಿಯರೂ ಇನ್ನಿಬ್ಬರು ಹಿಡಿತದಿಂದ ಉಳಿಸಿಕೊಳ್ಳಲಾರರು ಎಂದು ಹೇಳಿರುವರು. ಹಿಂದೂಸ್ಥಾನವು 1939 ರಿಂದ ಮಿತ್ರಪಕ್ಷದವರಿಗೆ ಯಾವರೀತಿ ಸಹಾಯ ಮಾಡುತ್ತಿರುವುದು ಗೊತ್ತೊಂಬು. ಇದು ಆಕ್ಸಿಸ್ ಪಕ್ಷಕ್ಕೆ ಸೇರಿದರೆ ನಮಗೆ ಎಷ್ಟು ನಷ್ಟವೆಂದು ಎಲ್ಲರೂ ತಿಳಿಯಬೇಕು. ಕಾಕ್ಸಸ್ ಯುದ್ಧದಿಂದ ಎಷ್ಟು ಪ್ರಯೋಜನವೋ ಅಷ್ಟು ಹಿಂದೂಸ್ಥಾನದವರ ಸಹಾಯ ನಮಗೆ ಬೇಕು. ದಕ್ಷಿಣ ಪೆಸಿಫಿಕ್‌ನಲ್ಲಿ ಇಂಡಿಯಾ ಮಾತ್ರ ನನಗೆ ಉಳಿದಿದೆ. ಇದು ಆಕ್ಸಿಸ್ ಸಂಗಡ ಸೇರಿದರೆ ನಾವು ಚೈನಾಕ್ಕೆ ಸಹಾಯ ಮಾಡಲು ಆಗುವುದಿಲ್ಲ. ಜೈನಾ ಉಳಿದರೂ ಜಪಾನಿಯರನ್ನು ಓಡಿಸಲು ಆಗುವುದಿಲ್ಲ ನನಗೆ ಮಿಡಲ್ ಈಸ್ಟ್‌ನ ಯುದ್ಧದಿಂದ ಪಾರಾಗಲು ಇಂಡಿಯ ಸಹಾಯ ನನಗೆ ಬೇಕೇಬೇಕು. ದಿವಸ ತಳ್ಳಿ ಹಾ ಒಂದರೆ ಆಂತರಿಕವಾಗಿ ಬೆಳೆಯುತ್ತ ಸುಜಯ ದಳವು ಉದ್ಭವಿಸುವುದು. ನಾನು ಇಂಡಿಯಾವನ್ನು ಪೂರ್ತಿ ಸುತ್ತಿರುವೆನು. ಅಲಹಾಬಾದ್ ಕಾಂಗ್ರೆಸ್ಸಿಗೆ ಸಹಾ ಹೋಗಿದ್ದೆ. ಅಲ್ಲಿ ಮುಖಂಡರನ್ನೆಲ್ಲಾ ನೋಡಿ ಅವರ ಸಂಗಡ ಒಹಳ ಹೊತ್ತು ಚರ್ಚೆ ನಡೆಸಿದೆ ಅಲ್ಲಿಂದ ಕಲಕತ್ತ, ದೆಹಲಿ, ಮುಂಬಯಿ ಇನ್ನೂ ಇತರ ನಗರಗಳಲ್ಲಿದ್ದ ಎಲ್ಲಾ ಪ್ರಮುಖರನ್ನು ನೋಡಿದ್ದೆ, ನಾನು ನೋದದವ ಇಲ್ಲ. ಯುದ್ಧಬೆಡವೆಂದೂ ಯುದ್ಧಬೇಕೆಂದೂ ವಿದ್ಯಾರ್ಥಿಗಳೂ, ಆಕ್ಸಿಸ ಅನುಮಾಯಿಕರಾದ ಶ್ರೀ ಸಬೋಸ್ ಜಂಪ್ರಜೋಸ್‌ರವರೂ, ಜಿನ್ನ ಪಾರ್ಟಿಗೆ ಸೇರಿದ ಮುಸಲ್ಮಾರನ್ನೂ, ವ್ಯವಸಾಯಗಾರರನ್ನೂ ಕಾರ್ಖಾನೆಯ ಯಜಮಾನರನ್ನೂ ಇವರನ್ನೆಲ್ಲಾ ನೋಡಿ ಅವರ ಆಶೆಗಳನ್ನು ತಿಳಿದುಕೊಂಡಿರುವೆನು. ಆದರೂ ಯಾರನ್ನು ನೋಡಬೇಕೋ ಎಲ್ಲಿ ಈ ಸಂಸ್ಥೆಯ ಬೇಗದ ಕೈ ಇದೆಯೋ ಅದು ಪತ್ತೆಯಾಗಲಿಲ್ಲ. ಅದೃಷ್ಟವಸಾತ್ ವೈಸರಾಯರವರು ಗಾಂಧಿಜೀಯವರನ್ನು ನೋಡಿ ಎಂದು ಹೇಳಿದರು. ನಾನು ಇವರನ್ನು ನೋಡಿ 10 ವರ್ಷವಾಗಿತ್ತು.

ಅಲ್ಲದೆ ವೈಸರಾಯರು ಕಾಂಗ್ರೆಸ್ ಅಂದರೆ ಗಾಂಧಿಜೀ, ಇನ್ನು ಅದು ಅವರದೇ. ಸಾಯುವ ತನಕ ಕಾಂಗ್ರೆಸ್ಸನ್ನು ನಡೆಸುವವರು ಗಾಂಧಿಜೀ ಎಂದರು ಅದರೂ ವೈಸರಾಯರು ಕಾಂಗ್ರೆಸ್ ಹಿಂದೂಸ್ಥಾನವಲ್ಲವೆಂದರು. ಗಾಂಧಿಜೀ ಹೇಳುವುದು ಹಿಂದೂಸ್ಥಾನ ಸ್ವತಂತ್ರವಾದರೆ ಹಿಂದು ಮುಸಲ್ಮಾನ್ ಪ್ರಶ್ನೆ ತಾನೇ ಜಗ್ಗೆ ಹರಿಯುವುದೆಂದು ತಿಳಿದಿರುವುದು. ನಾನು ಇಂಗ್ಲೀಷಾನವರನ್ನು ದ್ವೇಷಿಸುವುದಿಲ್ಲ ಎಂದು ಸಹಾ ಗಾಂಧಿಜೀಯವರು ಹೇಳಿದ್ದರು. ಗಾಂಧಿಜೀಯೆಂದರೆ ಹಿಂದೂಸ್ಥಾನವಿಗೆ ವಾಣಿ. ಅವರ ಮಾತೇ ವೇದವಾಕ್ಯ. ಹೇಳಿದ ಹಾಗೆ ಕೇಳುತ್ತಾರೆ. ಗಾಂಧಿಜೀಯನ್ನು ಬಂಧಿಸಿದರೆ ಅದನ್ನು ಹಿಂದೂಸ್ಥಾನದಲ್ಲಿ ಯಾರೂ ಸಹಿಸಲಾರರು. ಗಾಂಧಿಜೀ, ಸುಭಾಷ್ ಇವರನ್ನು ದಸ್ಯಗಿರಿ ಮಾಡಿದ್ದು ಆಂಗ್ಲೇಯರು ಹಿಂದೂಸ್ಥಾನದಲ್ಲಿ 200 ವರ್ಷ ರಾಜ್ಯಭಾರ ಮಾಡಿದ ಫಲ ಇಪ್ಪತ್ತೈದು ವರ್ಷಗಳಿಂದ ಹಿಂದೂಸ್ಥಾನದವರು ಬೇಡಿಕೆಗಳನ್ನು ಸಲ್ಲಿಸಿದರೂವುದು ಕೂಡಲೆ ಸ್ವತಂತ್ರ ಕೊಡಬೇಕೆನ್ನುವುದು. ಈಚಿಗೆ ಸರ್ಕಾರದವರು ಅನೇಕರನ್ನು ಗಲ್ಲಿಗೇರಿಸಿದ್ದು ಸಹ ಕಾಂಗ್ರೆಸ್ಸಿನವರಿಗೆ ತೃಪ್ತಿಯನ್ನುಂಟು ಮಾಡಿದೆ.

ಇಂಗ್ಲೆಂಡಿನವರಾಗಲೀ ಅಮೇರಿಕಾದವರಾಗಲೀ ಇಂಡಿಯಾದಲ್ಲಿ ಮೊದ ಲಾವರ್ತಿ ಕಾಲಿಟ್ಟ ಕೂಡಲೆ ಇದೇನು ಗುಲಾಮರಾಜ್ಯವೋ ಎನ್ನಬಹುದು. ನವ್ಯ (ಅಮೆರಿಕ) ಪುಗಿಂತ ಒಜ್ಜೋ ಸಧದಲ್ಲಿ ಇಂಡಿಯಾದವರು ಸ್ವತಂತ್ರ ರಾಗಿರುವರು. ಸ್ವತಂತ್ರ ಭೈನಾದಲ್ಲಿರುವುದಕ್ಕಿಂತ ಹಿಂದೂಸ್ಥಾನದಲ್ಲಿರುವವರು ಹೆಚ್ಚು ಸ್ವತಂತ್ರರು. ತಮ್ಮ ಮನಸ್ಸಿನ ಬಚ್ಚಿ ಮಾತನಾಡುವುದು. ಗೆಳ್ಳಬ ಹೋ ಭಯವಿಲ್ಲ. ಯುದ್ಧದಿಂದ ಕಷ್ಟವಾಗಿಲ್ಲ ರೇಷನಿಂಗ್ ಪದ್ಧತಿಯಿಲ್ಲ(?) ಮಿ॥ ಚರ್ಚಿಲರು ಹಿಂದೂಸ್ಥಾನವನ್ನು ಅಟ್ಲಾಂಟಿಕ್ ಚಾರ್ಟರಿನಲ್ಲಿ ಸೇರಿಸದರೂ

ಹೆಚ್. ಆರ್. ಜಿ. ಸಿ. ಯವರ

ಶ್ರೀ ಪಿಕ್ಚರ್ಸ್ ತಯಾರಿಕೆ

ವಾಣಿ ಎಂಬ ಕನ್ನಡ ಸಾಮಾಜಿಕ ಚಿತ್ರ

ನಿಮ್ಮ ಮನರಂಜನೆಗಾಗಿ ಬೇಗಲೇ ಬರಲಿದೆ

ಸಂಗೀತರತ್ನ ಟಿ. ಚೌಡಯ್ಯ, ಕಲ್ಚರ್ಡ್ ಕಮೆಡಿಯನ್ ಕೆ. ಹಿರಣ್ಣಯ್ಯ, ಗಾಯನಗಾಂಧರ್ವ ಚಂಪೆ ವೈದ್ಯನಾಥ ಭಾಗವತರ್ ಮೃದಂಗವಿದ್ವಾನ್ ಮಣಿ ಕೋಕಿಂಕಂಠ ಬಳ್ಳಾರಿ ಲಲಿತ, ಜಂದ್ಯಮ್ಮ, ರತ್ನ, ಪಂಡರೀಬಾಯಿ, ಧನಭಾಗ್ಯಂ ಎ. ನಾರಾಯಣರಾವ್, ಕೆ. ಎಂ. ಮಹದೇವ್, ಮಾಸ್ಟರ್ ಬಿ. ವಿ. ಕೆ. ಮೂರ್ತಿ ಮುಂತಾದವರು ತಾರಾಗಣದಲ್ಲಿದ್ದಾರೆ.

ನಿರ್ದೇಶಕರು— ಜಿ. ಆರ್. ರಾಮಯ್ಯನವರು

ಸಂಗೀತ ನಿರ್ದೇಶಕರು— ಸಂಗೀತರತ್ನ ಟಿ ಚೌಡಯ್ಯನವರು

ತಯಾರಿಕೆ— ಸಾಹುಕಾರ್ ಟಿ ಎಸ್. ಶಿವಬಸವಸ್ವಾಮಿ

ಕಥಾ ಮತ್ತು ದಿಗ್ದರ್ಶಕರು— ಕೆ. ಹಿರಣ್ಣಯ್ಯ ಮತ್ತು ಎಂ. ಎಸ್. ಗೋಪಾಲ್.

ಸ್ಟೂಡಿಯೊ—ಸೆಂಟ್ರಲ್ ಸ್ಟೂಡಿಯೋಸ್ ಲಿವಿಟೆಡ್, ಕೊಯಮುತ್ತೂರು

ಶಕ್ತಿ ಸಾಧನೆಗೆ ಸುಲಭೋಪಾಯವು



ಸೇವನೆ ಎಂಬುವುದು ನಿಮ್ಮ ಜಿಲ್ಲಾಪಟ್ಟಣದಲ್ಲಿರಲಿ

ಅನೇಕರಿಂದ ಪ್ರಶಂಸಿಸಲ್ಪಟ್ಟಿದೆ. ವಸ್ತುಪ್ರದರ್ಶನಗಳಲ್ಲಿ ಪ್ರಾಶಸ್ತ್ಯವನ್ನು ಪಡೆದಿದೆ

ಬೆಲೆ 1 ರೂಪಾಯಿ

ವುದು ಕೊರತೆಯಾಗಿದೆ. ಸೆಂಟ್ರಲ್ ಪವರ್ ಕ್ರಿಪ್ಸಿಂ ಸಂಧಾನ ವಿಷಯದಲ್ಲಿಯೂ ಅಸಮಾಧಾನ, ಯುದ್ಧ ಮುಗಿದ ನಂತರ ಸ್ವತಂತ್ರ ಕೊಡತವ್ಯರಲ್ಲಿ ನಂಬಿಕೆ. ಯಿಲ್ಲ. ಆಜಾದ್, ನೆಹರು ಇವರುಗಳು, ಅಮೆರಿಕಾ ಹಿಂದೂಸ್ಥಾನ ವಿಚಾರದಲ್ಲಿ ಸ್ವಾವೇಶಿಸಿದರೆ ಅನುಕೂಲವಾಗುವುದೆಂದು ಹೇಳಿರುವರು ಇದರಿಂದ ಮಿತ್ರಪಕ್ಷದವರಿಗೆ ಸಹಾಯ ಮಾಡಲು ಅನುಕೂಲವಾಗುವುದೆಂದು ಹೇಳಿರುವರು.

ನೆಹರು, ಆಜಾದ್, ಗಾಂಧೀಜಿಯವರು ಹೇಳಿದಹಾಗೆ ನಡೆಯಲಿಲ್ಲವೆ? ನನಗೆ ತಿಳಿದವರೆಟ್ಟಿಗೆ ಆಂಗ್ಲೇಯರು ಹಿಂದೂಸ್ಥಾನವನ್ನು ದಬ್ಬಾಳಿಕೆಯಲ್ಲಿಟ್ಟ ಕೊಂಡು, ಜಪಾನೀಯರನ್ನು ಎದುರಿಸಲಾರರು. ನನಗೆ ಚೈನಾ ಹೇಗೆ ಸಹಾಯವೋ ಹಾಗೇ ಇಂಡಿಯಾದ ಸಹಾಯವೂ ಅತ್ಯವಶ್ಯಕ ಇಂಥದನ್ನು ನಾವು ಕಳೆದುಕೊಳ್ಳಬಾರದ ಯುದ್ಧ ಪ್ರಪಂಚದ ಒಹು ಭಾಗದಲ್ಲಿರುವ ಜನಾಂಗಗಳಿಗೆ ಕೊಡಿಸುತ್ತೇವೆನ್ನುವದು ಹಿಂದೂಸ್ಥಾನಕ್ಕೇತಕ್ಕೆಲ್ಲ?